CW.6 PW.4

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ
ನ್ಯಾಯಾಲಯದಲ್ಲಿ
CC No. 948/2016

| | |
|---|---|
| ಸಾಕ್ಷಿದಾರರ ಹೆಸರು | ಶಂಭೇಗೌಡ |
| ತಂದೆಯ ಹೆಸರು | ಚಿಕ್ಕಶಂಭಯ್ಯ |
| ವಯಸ್ಸು | 58 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಚಂಬಳಿಕೆದೊಡ್ಡಿ ಗ್ರಾಮ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 11.03.2025 |

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-

ಈ ಪ್ರಕರಣದ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1, ಚಾಸಾ-4, ಚಾಸಾ-5 ರವರ ಪರಿಚಯವಿಲ್ಲ. ಚಾಸಾ-2, ಚಾಸಾ-3, ಚಾಸಾ-7 ಮತ್ತು ಚಾಸಾ-8 ರವರ ಪರಿಚಯ ನನಗೆ ಇಲ್ಲ. ಮೃತ ಕದರಮ್ಮ ರವರು ನನಗೆ ಗೊತ್ತು.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ನಿಪಿ-3 ಕ್ಕೆ ನಾನು ಯಾವಾಗ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಿಪಿ-3 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-3 ಕ್ಕೆ ಪೊಲೀಸರು ಯಾವ ವಿಚಾರಕ್ಕಾಗಿ ನನ್ನ ಸಹಿ ಪಡೆದಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲೀಸರ ಕೋರಿಕೆ ಮೇರೆಗೆ ನಿಪಿ-3 ಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ-3 ಕ್ಕೆ ನನ್ನೊಂದಿಗೆ ಮತ್ತಾರು ಸಹಿ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-3 ಕ್ಕೆ ಸಹಿ ಮಾಡಿದಾಗ

ಸಮಯ ಎಷ್ಟಾಗಿತ್ತು ಎನ್ನುವುದು ನನಗೆ ಈಗ ನೆನಪಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಸ ಸ ಅ ರವರು ಕೋರಿದ್ದು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ ಸ ಅ ರವರಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುः- ಸ ಸ ಅ ರವರಿಂದः-

ಕೋಡಿಹಳ್ಳಿ ಠಾಣೆ ಮೊಕದ್ದಮೆ ಸಂಖ್ಯೆ 62/2015 ಕ್ಕೆ ಸಂಬಂಧಿಸಿದಂತೆ ದಿಃ 21.05.2015 ರಂದು ಅಪಘಾತದ ವಿಚಾರಕ್ಕೆ ಸಂಬಂಧಿಸಿದಂತೆ ಪೋಲೀಸರು 12.15 ರಿಂದ 12.45 ಗಂಟೆಯಲ್ಲಿ ನನ್ನ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿ ಅದೇ ಸ್ಥಳದಲ್ಲಿ ಅಪಘಾತವಾಗಿದೆ ಎಂಬ ವಿಚಾರವನ್ನು ಪೋಲೀಸರು ನನಗೆ ತಿಳಿಸಿ ಒಂದು ಮಹಜರ್ ತಯಾರಿಸಿ ಅದರ ಸಂಗತಿಗಳನ್ನು ನನಗೆ ಓದಿ ಹೇಳಿ ಸ್ಥಳದಲ್ಲಿಯೇ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನನ್ನೊಂದಿಗೆ ಚಾಸಾ-1 ಮತ್ತು ಚಾಸಾ-5 ರವರು ಸಹ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ.

ಆರೋಪಿ ಮತ್ತು ನಾನು ಒಂದೇ ಊರಿನವರು ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥರಾದ ಕಾರಣ, ಅವರಿಗೆ ಸಹಾಯವಾಗಲೀ ಎಂದು ನಿಪಿ-3 ರಲ್ಲಿರುವ ಸಂಗತಿಗಳು ನನಗೆ ಗೊತ್ತಿದ್ದರೂ, ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುः- ಆರೋಪಿ ಪರ ವಕೀಲರಿಂದः-ಇಲ್ಲ.
ಮರುವಿಚಾರಣೆ ಇಲ್ಲ.

ಓ ಹೇ ಕೇ ಸರಿ ಇದೆ

(ರಾಧಾ ಎಸ್.)
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ.